ವಿಶ್ವವಾಣಿ
ವಿಶ್ವಾಸವೇ ವಿಶ್ವ



ಪ್ರೆಸ್‌ಕ್ಲಬ್ ಆವರಣದಲ್ಲಿ ಬುಧವಾರ ನಡೆದ ಹೊಸ ವರ್ಷದ ಆಚರಣೆಯ ಸಂದರ್ಭದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ವಿಶ್ವವಾಣಿ ಡಿಜಿಟಲ್ ಸಂಪಾದಕ ರಮೇಶ್ ಕುಮಾರ್ ಸೇರಿ 55 ಸಾಧಕ ಪತ್ರಕರ್ತರಿಗೆ ಪ್ರೆಸ್‌ಕ್ಲಬ್ ಪ್ರಶಸ್ತಿ ಪ್ರದಾನ ಮಾಡಿದರು. ಅಧ್ಯಕ್ಷ ಶ್ರೀಧರ್, ಉಪಾಧ್ಯಕ್ಷ ಮೋಹನ್‌ಕುಮಾರ್ ಬಿ.ಎನ್, ಜನರಲ್ ಸೆಕ್ರೆಟರಿ ಶಿವಕುಮಾರ್ ಬೆಳ್ಳಿತ್ತಟ್ಟೆ ಮತ್ತಿತರರು ಇದ್ದರು. **ಚಿತ್ರ: ಸುಧಾಕರ್ ದೇವರಾಜ್**

# ಆತ್ಮಸಾಕ್ಷಿಯಿಂದ ಕೆಲಸ ಮಾಡಿ: ಹೊರಟ್ಟಿ

## ಪ್ರೆಸ್‌ಕ್ಲಬ್ ಪ್ರಶಸ್ತಿ ಪ್ರದಾನ | ಸಮಾಜ ಪರಿವರ್ತನೆಗೆ ಮಾಧ್ಯಮ ಕೊಡುಗೆ ಅನನ್ಯ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಪತ್ರಕರ್ತರು ಉತ್ತಮವಾದ ಕೆಲಸ ಮಾಡಬೇಕು. ನೀವು ಆತ್ಮಸಾಕ್ಷಿಯಿಂದ ಕೆಲಸ ಮಾಡಿದ್ದರೆ ಯಾರಿಗೂ ಹೆದರುವ ಅವಶ್ಯಕತೆ ಇಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ವರ್ಷದ ವಿಶೇಷ ವ್ಯಕ್ತಿ ಹಾಗೂ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪತ್ರಿಕಾರಂಗಾ ಪ್ರಜಾಪ್ರಭುತ್ವದ 4ನೇ ಅಂಗವಾಗಿದ್ದು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ತಪ್ಪು ಮಾಡಿದಾಗ ತಿದ್ದುವ ಕೆಲಸ ಮಾಡುತ್ತದೆ. ಸಮಾಜವನ್ನು ತಿದ್ದುವಲ್ಲಿ ಮತ್ತು ಪರಿವರ್ತನೆ ಮಾಡುವಲ್ಲಿ ಪತ್ರಿಕಾರಂಗ ಮಹತ್ವದ ಪಾತ್ರ ವಹಿಸುತ್ತವೆ. ಮಾಧ್ಯಮದವರು ಪ್ರಯತ್ನ ಪಟ್ಟರೆ ಎಲ್ಲವನ್ನು ಸರಿ ಮಾಡಬಹುದು ಎಂದರು.

ಮೊದಲು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಒಳಗೆ ಸುದ್ದಿವಾಹಿನಿಗಳಿಗೆ ಅವಕಾಶವಿರಲಿಲ್ಲ. ನಾನು ವಿಧಾನ ಪರಿಷತ್ ನಲ್ಲಿ ಸುದ್ದಿವಾಹಿನಿಗಳ ಪ್ರವೇಶ ಹಾಗೂ ಪತ್ರಕರ್ತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಮಾಡಿ ಕೊಟ್ಟಿದ್ದೇನೆ. ಪತ್ರಕರ್ತರು ಕೇಳುವ ಪ್ರಶ್ನೆಗಳಿಗೆ ನಾವು ಮೈ ತುಂಬಾ ಕಣ್ಣಾಗಿಸಿಕೊಂಡಿರುತ್ತೇವೆ. ನಾನು ಪತ್ರಕರ್ತರ ಜೊತೆ ಅಪಾರ ಒಡನಾಟವಿಟ್ಟುಕೊಂಡಿದ್ದೇನೆ. ಅನೇಕ ಸಲಹೆಯನ್ನು ಪತ್ರಕರ್ತರಿಂದ ಪಡೆಯುತ್ತೇನೆ ಎಂದರು.

ಕೆ.ವಿ.ಪ್ರಭಾಕರ್ ಅವರನ್ನು ನಾವು ಜೂನಿಯರ್ ಸಿದ್ದರಾಮಯ್ಯ ಎಂದು ಕರೆಯುತ್ತೇವೆ. ಯಾಕೆಂದ್ರೆ, ಸಿಎಂ ಸಿದ್ದರಾಮಯ್ಯ ಅವರ ಜೊತೆ ಮಾತಾಡಲು ಮೊದಲು ಕೆ.ವಿ.ಪ್ರಭಾಕರ್‌ಅವರನ್ನು ಕೇಳಬೇಕು. ಎಷ್ಟೋ ಸಲ ನಾವು ಇಕ್ಕಟ್ಟಿನಲ್ಲಿ ಸಿಕ್ಕಾಗ ಅದನ್ನು ಕೆ.ವಿ.ಪ್ರಭಾಕರ್‌ಪರಿಹರಿಸಿದ್ದಾರೆ ಎಂದು ಹೇಳಿದರು.

ನಾವು ಎಷ್ಟೇ ಬೆಳೆದರೂ ಮೂಲ ವೃತ್ತಿಯನ್ನು ಮರೆಯಬಾರದು. ಪ್ರಭಾಕರ್‌ಅವರು ಸಿಎಂ ಮಾಧ್ಯಮ ಸಲಹೆಗಾರರಾಗಿದ್ದರೂ ಕೂಡ ಪತ್ರಿಕಾ ರಂಗವನ್ನು ಅವರು ಮರೆತಿಲ್ಲ ಎಂದು ಶ್ಲಾಘಿಸಿದರು.

ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕ ಷಡಕ್ಷರಿ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್‌ಬೆಳ್ಳಿತಟ್ಟೆ, ಉಪಾಧ್ಯಕ್ಷ ಮೋಹನ್ ಕುಮಾರ್‌ಬಿ.ಎನ್., ವಸತಿ ಸಚಿವರ ಮಾಧ್ಯಮ ಸಲಹೆಗಾರ ಲಕ್ಷ್ಮೀನಾರಾಯಣ, ಕೈಗಾರಿಕೆ ಸಚಿವರ ಮಾಧ್ಯಮ ಸಲಹೆಗಾರ ಶ್ರೀಧರ್‌ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಗುರುಮೂರ್ತಿ ಸೇರಿದಂತೆ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

### ಉದಯವಾಣಿಯ ಗುರುಮೂರ್ತಿ ಸೇರಿ 55 ಪತ್ರಕರ್ತರಿಗೆ ಪ್ರಶಸ್ತಿ

ಉದಯವಾಣಿ ದಿನಪತ್ರಿಕೆ ಮುಖ್ಯ ವರದಿಗಾರ ಎಂ.ಎನ್.ಗುರುಮೂರ್ತಿ ಸೇರಿ 55 ಮಂದಿ ಪತ್ರಕರ್ತರಿಗೆ 2025ನೇ ಸಾಲಿನ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್‌ಅವರಿಗೆ ವರ್ಷದ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂ1 ಕನ್ನಡ ದಿನಪತ್ರಿಕೆ ವಿಜಯವಾಣಿ www.vijayavani.net VIJAYAVANI »

# 55 ಸಾಧಕರಿಗೆ ಪ್ರೆಸ್‌ಕ್ಲಬ್ ಪ್ರಶಸ್ತಿ ಪ್ರದಾನ

## ವಿಜಯವಾಣಿಯ ಪ್ರಭುದೇವ ಶಾಸ್ತ್ರೀಮಠ, ಮಲ್ಲಿಕಾಚರಣ್ ವಾಡಿಗೆ ಗೌರವ







ವಿಜಯವಾಣಿ ಚಿತ್ರ

**ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರಿಗೆ ವಿಶೇಷ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಜಯವಾಣಿಯ ಸಹಾಯಕ ಸಂಪಾದಕ ಪ್ರಭುದೇವ ಶಾಸ್ತ್ರೀಮಠ ಮತ್ತು ಸುದ್ದಿ ಸಂಪಾದಕ ಮಲ್ಲಿಕಾಚರಣ್ ವಾಡಿ ಅವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಷಡಕ್ಷರಿ, ಪ್ರೆಸ್‌ಕ್ಲಬ್ ಅಧ್ಯಕ್ಷ ಶ್ರೀಧರ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.**

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಜಯವಾಣಿಯ ಸಹಾಯಕ ಸಂಪಾದಕ ಪ್ರಭುದೇವ ಶಾಸ್ತ್ರೀಮಠ ಹಾಗೂ ಸುದ್ದಿ ಸಂಪಾದಕ ಮಲ್ಲಿಕಾಚರಣ್ ವಾಡಿ ಸೇರಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ ವಿವಿಧ ಮಾಧ್ಯಮಗಳ 55 ಮಂದಿಗೆ ಬೆಂಗಳೂರು ಪ್ರೆಸ್‌ಕ್ಲಬ್ 2025ನೇ ಸಾಲಿನ 'ವಾರ್ಷಿಕ ಪ್ರಶಸ್ತಿ' ನೀಡಿ ಗೌರವಿಸಿತು.

**ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್‌ಗೆ ವಿಶೇಷ ಪ್ರಶಸ್ತಿ**

ಪ್ರೆಸ್‌ಕ್ಲಬ್ ಆವರಣದಲ್ಲಿ ಬುಧವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರು ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಿದರು.

ಪ್ರಶಸ್ತಿ ವಿತರಣೆ ಬಳಿಕ ಮಾತನಾಡಿದ ಬಸವರಾಜ ಹೊರಟ್ಟಿ, ಶಾಸಕಾಂಗ ಮಾಡದ ಕೆಲಸವನ್ನು ಮಾಡುವ ಶಕ್ತಿ ಇರುವುದು ಪತ್ರಿಕಾರಂಗಕ್ಕೆ ಮಾತ್ರ. ಸಮಾಜವನ್ನು ಸರಿಯಾದ ದಾರಿಗೆ ತರುವಲ್ಲಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗಕ್ಕೆ ಜವಾಬ್ದಾರಿ ಇದೆ ಎಂದು ಹೇಳಿದರು.

> **ಪತ್ರಿಕೋದ್ಯಮ ಕ್ಷೇತ್ರದ ಸಾಧಕರನ್ನು ಗುರುತಿಸಿ ಪ್ರೆಸ್‌ಕ್ಲಬ್ ಗೌರವಿಸುವ ಕೆಲಸ ಮಾಡಿದೆ. ಹೊಸ ವರ್ಷದಲ್ಲಿ ನಿಮಗೆ ಮತ್ತಷ್ಟು ಸಾಧನೆ ಮಾಡುವ ಅವಕಾಶಗಳು ದೊರೆಯಲಿ, ಮತ್ತಷ್ಟು ಏರುವಂತಾಗಲಿ.**
>
> **ಷಡಕ್ಷರಿ** ತಿಪಟೂರು ಶಾಸಕ

ವಿಧಾನಸಭಾ ಕಲಾಪಗಳಿಗೆ ಮಾಧ್ಯಮಗಳಿಂದ ಈ ಹಿಂದೆ ದೂರ ಇಡಲಾಗಿತ್ತು. ಆದರೆ ಪರಿಷತ್ತಿನಲ್ಲಿ ಇಂದಿಗೂ ಟಿವಿ ಮಾಧ್ಯಮಗಳಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಮಾಧ್ಯಮಗಳು ನಮ್ಮ ಚಲನವಲನಗಳನ್ನು ವೀಕ್ಷಣೆ ಮಾಡುತ್ತಿದ್ದರೆ, ನಾವು ಸರಿಯಾಗಿರುತ್ತೇವೆ ಎಂಬುದು ನನ್ನ ವಾದ ಎಂದರು.

ಪ್ರೆಸ್‌ಕ್ಲಬ್ ವಿಶೇಷ ವಾರ್ಷಿಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕೆ.ವಿ. ಪ್ರಭಾಕರ್, ಪ್ರೆಸ್‌ಕ್ಲಬ್ ಒಂದು ರೀತಿಯಲ್ಲಿ ಪತ್ರಿಕೋದ್ಯಮದ ವಿಶ್ವವಿದ್ಯಾಲಯವಿದ್ದ ಹಾಗೆ. ಹಿರಿಯರು ಕಿರಿಯರಿಗೆ ಮಾರ್ಗದರ್ಶನ ನೀಡಲು ಸೂಕ್ತವಾದ ಸ್ಥಳವಾಗಿದೆ. ನಾನು ಕೂಡ ಪ್ರೆಸ್‌ಕ್ಲಬ್ ಸದಸ್ಯನಾಗಿ 25 ವರ್ಷ ಕಳೆದಿದ್ದು, ಇಲ್ಲಿಂದ ಸಾಕಷ್ಟು ಕಲಿತಿದ್ದೇನೆ ಎಂದು ಅನುಭವ ಹಂಚಿಕೊಂಡರು.

ಕ್ಲಬ್‌ಗೆ ಹೊಸಕೆರೆಹಳ್ಳಿಯಲ್ಲಿ ನೀಡಿರುವ ಒಂದು ಎಕರೆ ಜಾಗದಲ್ಲಿ ಪ್ರೆಸ್‌ಕ್ಲಬ್ ಭವನ ನಿರ್ಮಾಣವಾದ ಬಳಿಕ ಪತ್ರಿಕೋದ್ಯಮದ ಕಾಲೇಜು ಒಳಗೊಂಡಂತೆ ಹೆಚ್ಚಿನ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗಲಿದೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿಯೂ ಪತ್ರಕರ್ತರ ಸಮಸ್ಯೆಗಳನ್ನು ಬಗೆಹರಿಸುವ ಕೆಲಸವನ್ನು ನಿರಂತರವಾಗಿ ಮಾಡುವುದಾಗಿ ಭರವಸೆಯನ್ನು ನೀಡಿದರು.

ಸಚಿವ ಜಮೀರ್ ಅಹಮದ್ ಖಾನ್ ಅವರ ಮಾಧ್ಯಮ ಸಲಹೆಗಾರ ಲಕ್ಷ್ಮೀನಾರಾಯಣ, ಸಚಿವ ಎಂ.ಬಿ. ಪಾಟೀಲ್ ಮಾಧ್ಯಮ ಸಲಹೆಗಾರ ಶ್ರೀಧರ್, ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಕಾರ್ಯದರ್ಶಿ ಮಂಜುನಾಥ್, ಜಂಟಿ ಕಾರ್ಯದರ್ಶಿ ಧರಣೇಶ ಸೇರಿ ಎಲ್ಲ ಪದಾಧಿಕಾರಿಗಳು ಉಪಸ್ಥಿತರಿದ್ದರು,

ಸಂಯುಕ್ತ ಕರ್ನಾಟಕ ಬೆಂಗಳೂರು ನಗರ/ಗ್ರಾಮಾಂತರ/ಬೆಂ. ದಕ್ಷಿಣ

# ಪತ್ರಕರ್ತರು ಆತ್ಮಸಾಕ್ಷಿಯಿಂದ ಕರ್ತವ್ಯ ನಿರ್ವಹಿಸಿ

## ಸಭಾಪತಿ ಹೊರಟ್ಟಿ ಸಲಹೆ । ಸಂ.ಕ.ಶ್ರೀನಿವಾಸ್ ಮೂರ್ತಿ ಸೇರಿ 55 ಮಂದಿಗೆ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರದಾನ

ಸಂ.ಕ.ಸಮಾಚಾರ, ಬೆಂಗಳೂರು

ಪತ್ರಕರ್ತರಿಂದ ಸಮಾಜ ಸುಧಾರಣೆ ಸಾಧ್ಯ. ಆ ನಿಟ್ಟಿನಲ್ಲಿ ಆತ್ಮಸಾಕ್ಷಿಯಿಂದ ಕರ್ತವ್ಯ ನಿರ್ವಹಿಸಿದರೆ, ಯಾರಿಗೂ ಹೆದರುವ ಅವಶ್ಯಕತೆ ಇಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ನಗರದ ಪ್ರೆಸ್‌ಕ್ಲಬ್ ವತಿಯಿಂದ ಬುಧವಾರ ಸಾಧಕ ಪತ್ರರ್ಕತರಿಗೆ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡಿದ ಅವರು, ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನೊಳಗೆ ಸುದ್ದಿವಾಹಿನಿಗಳಿಗೆ ಅವಕಾಶವಿರಲಿಲ್ಲ. ನಾನು ವಿಧಾನ ಪರಿಷತ್‌ನಲ್ಲಿ ಸುದ್ದಿವಾಹಿನಿಗಳ ಪ್ರವೇಶ ಹಾಗೂ ಪತ್ರಕರ್ತರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದ್ದೇನೆ. ಪತ್ರಕರ್ತರು ಕೇಳುವ ಪ್ರಶ್ನೆಗಳಿಗೆ ನಾವು ಎಚ್ಚರಿಕೆಯಿಂದ ಉತ್ತರ ನೀಡುತ್ತೇವೆ. ನಾನು ಪತ್ರಕರ್ತರ ಜೊತೆ ಅಪಾರ ಒಡನಾಟವಿಟ್ಟುಕೊಂಡಿದ್ದೇನೆ. ಅನೇಕ ಸಲಹೆಯನ್ನು ಪತ್ರಕರ್ತರಿಂದ ಪಡೆಯುತ್ತೇನೆ ಎಂದರು. ಕೆ.ವಿ.ಪ್ರಭಾಕರ್ ಅವರನ್ನು ಜೂನಿಯರ್ ಸಿದ್ದರಾಮಯ್ಯ ಎಂದು ಕರೆಯುತ್ತೇವೆ. ಯಾಕೆಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಮಾತಾಡಲು ಮೊದಲು ಕೆ.ವಿ.ಪ್ರಭಾಕರ್ ಅವರನ್ನು ಕೇಳಬೇಕು. ಎಷ್ಟೋ ಸಲ ನಾವು ಇಕ್ಕಟ್ಟಿನಲ್ಲಿ ಸಿಕ್ಕಾಗ ಅದನ್ನು ಅವರು ಪರಿಹರಿಸಿದ್ದಾರೆ ಎಂದರು. ಎಷ್ಟೇ ಎತ್ತರಕ್ಕೆ ಬೆಳೆದರು ಮೂಲ ವೃತ್ತಿಯನ್ನು ಮರೆಯಬಾರದು. ಪ್ರಭಾಕರ್ ಸಿಎಂ ಮಾಧ್ಯಮ ಸಲಹೆಗಾರರಾಗಿದ್ದರೂ, ಕೂಡ ಪತ್ರಿಕಾ ರಂಗವನ್ನು ಮರೆತಿಲ್ಲ ಎಂದು ಹೇಳಿದರು. ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್‌ಗೆ ವಿಶೇಷ ಪ್ರಶಸ್ತಿ ಸೇರಿದಂತೆ 55 ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಧಾನ ಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕ ಷಡಕ್ಷರಿ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಶಿವಕುಮಾರ್ ಬೆಳ್ಳಿತಟ್ಟೆ, ಜಂಟಿ ಕಾರ್ಯದರ್ಶಿ ಧರಣೇಶ್ ಬಿ.ಎನ್ ಸೇರಿದಂತೆ ಪ್ರೆಸ್‌ಕ್ಲಬ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.



ನಗರದ ಪ್ರೆಸ್‌ಕ್ಲಬ್ ವತಿಯಿಂದ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್‌ಗೆ ವಿಶೇಷ ಪ್ರಶಸ್ತಿಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರದಾನ ಮಾಡಿದರು.



ಸಂ.ಕ.ಹಿರಿಯ ಪತ್ರಕರ್ತ ಶ್ರೀನಿವಾಸ್ ಮೂರ್ತಿ ಅವರ ಪ್ರಶಸ್ತಿಯನ್ನು ಅವರ ಪುತ್ರಿ ಸ್ವೀಕರಿಸಿದರು.

ಕನ್ನಡಪ್ರಭ
ಗುರುವಾರ 1.01.2026

# ನಿರ್ಭೀತಿಯಿಂದ ಕೆಲಸ ಮಾಡಿ: ಪತ್ರಕರ್ತರಿಗೆ ಹೊರಟ್ಟಿ ಸಲಹೆ

## ಪ್ರೆಸ್ ಕ್ಲಬ್‌ನಿಂದ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ ಸಮಾರಂಭ



ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರಿಗೆ ಪ್ರೆಸ್‌ಕ್ಲಬ್ ವಿಶೇಷ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪತ್ರಕರ್ತರು ಯಾರಿಗೂ ಹೆದರದೆ ತಮ್ಮ ಕರ್ತವ್ಯ ನಿರ್ವಹಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಬೆಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಬುಧವಾರ ರಾತ್ರಿ ನಡೆದ 'ವರ್ಷದ ವ್ಯಕ್ತಿ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗದ ಜತೆಗೆ 4ನೇ ಅಂಗ ಪತ್ರಿಕೋದ್ಯಮ ಮಹತ್ವದ ಪಾತ್ರ ಪಡೆದಿದೆ. ಹಿಂದೆಂದಿಗಿಂತಲೂ ಇಂದು ಪತ್ರ ಕರ್ತರ ಪಾತ್ರ ಮಹತ್ವ ಪಡೆದಿದೆ. ರಾಜಕಾರಣಿಗಳಿಂದ ಹಲವು ವೇಳೆ ಕೆಲ ಕೆಲಸಗಳು, ಬದಲಾವಣೆ ಅಸಾಧ್ಯ, ಪಕ್ಷದ ರಾಜಕೀಯ ಸೇರಿ ಹಲವು ವಿಚಾರಗಳು ಅಂದುಕೊಂಡಿದ್ದನ್ನು ಮಾಡಲು ಬಿಡುವುದಿಲ್ಲ, ಹೀಗಾಗಿ ಶಾಸಕಾಂಗದ ಬಳಿ ಸುಧಾರಣೆ ಸಾಧ್ಯವಿದೆಯೊ ಇಲ್ಲವೊ ಗೊತ್ತಿಲ್ಲ. ಆದರೆ, ಪತ್ರಿಕಾ ರಂಗ ರಾಜ್ಯವನ್ನು ಸುಧಾರಿಸುವ ಸಾಮರ್ಥ್ಯ ಹೊಂದಿದೆ ಎಂದರು.

ಪತ್ರಕರ್ತರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡುವ ಗುಣವನ್ನು ಮುಂದುವರಿಸಿಕೊಂಡು ಹೋಗಬೇಕು. ಅದಕ್ಕೆ ಬೇಕಾದ ಎಲ್ಲ ಬೆಂಬಲವನ್ನು ನಾವು ನೀಡುತ್ತೇವೆ. ಈ ಹಿಂದೆ ವಿಧಾನಸಭೆಯಲ್ಲಿ ಮಾಧ್ಯಮವನ್ನು ನಿಷೇಧಿಸಿದಾಗ ವಿಧಾನ ಪರಿಷತ್‌ನಲ್ಲಿ ನಾನು ಅದಕ್ಕೆ ಅವಕಾಶ ಕೊಟ್ಟೆ. ಮಾಧ್ಯಮದವರು ಇದ್ದರೆ ನಾವು ಎಚ್ಚರವಾಗಿ ಇರುತ್ತೇವೆ ಎಂದು ಸ್ಪಷ್ಟಪಡಿಸಿದ್ದೆ ಎಂದು ಹೇಳಿದರು. ತಿಪಟೂರು ಶಾಸಕ ಕೆ, ಷಡಕ್ಷರಿ ಇದ್ದರು.

### ಪ್ರಭಾಕರ್‌ಗೆ ವಿಶೇಷ ಪ್ರಶಸ್ತಿ ಪ್ರದಾನ

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರಿಗೆ ಪ್ರೆಸ್ ಕ್ಲಬ್ ವಿಶೇಷ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಜತೆಗೆ ಏಷ್ಯಾನೆಟ್ ಸುವರ್ಣ ನ್ಯೂಸ್‌ನ ಆನಂದ ಬೈದನಮನೆ, ಇತರ ಸಂಸ್ಥೆಗಳ ಸುಭಾಶ್‌ಚಂದ್ರ ಎನ್‌ಎಸ್., ಲೋಚನೇಶ್ ಹೂಗಾರ್, ಮಲ್ಲಿಕಾ ಚರಣ ವಾಡಿ ಕೆ., ನಾಗರಾಜ ಎಂ., ಅತ್ತಿಗುಪ್ಪೆ ರವಿ ಕುಮಾರ್, ಶಿಲ್ಪಾ ಫಡ್ನಿಸ್ ಸೇರಿ ಸಾಧಕ ಪತ್ರಕರ್ತರಿಗೆ ಪ್ರೆಸ್‌ಕ್ಲಬ್ ವಾರ್ಷಿಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.